ಕರ್ನಾಟಕ ಸರ್ಕಾರ

ರಾಷ್ಟ್ರೀಯ ಆರೋಗ್ಯ ಅಭಿಯಾನ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ), ಬಾಗಲಕೋಟೆ

#128, ಜಿಲ್ಲಾ ಆಡಳಿತ ಭವನ, ಎನ್.ಹೆಚ್.ಎಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ನವನಗರ, ಬಾಗಲಕೋಟೆ– 587103

E.Mail ID: dhobagalkote@gmail.com Mob No: 94498-43041

ಸಂಖ್ಯೆ: **NHM/Vacant/Notification/04/2025-26** **Date: 30-May-2025**

## ಗುತ್ತಿಗೆ ನೇಮಕಾತಿ ಅಧಿಸೂಚನೆ

ವಿಷಯ: ಬಾಗಲಕೋಟೆ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 2024–25 ನೇ ಸಾಲಿನ ಆರ್.ಓ.ಪಿ.ಯಲ್ಲಿ ಅನುಮೋದನೆಯಾಗಿ, ಖಾಲಿ ಇರುವ ವಿವಿಧ ವೃಂದದ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಆನ್‌ಲೈನ್ ಮೂಲಕ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: ದಿನಾಂಕ: 09–01–2025 ಮತ್ತು ದಿನಾಂಕ: 06–05–2025 ರಂದು ಮಾನ್ಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಾಗಲಕೋಟೆ. ರವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಆರೋಗ್ಯ ಸಂಘದ ಸಭೆಯ ಅನುಮೋದನೆಯ ಮೇರೆಗೆ.

*****

ಬಾಗಲಕೋಟೆ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 2024–25 ನೇ ಸಾಲಿನ ಆರ್.ಓ.ಪಿ.ಯಲ್ಲಿ ಅನುಮೋದನೆಯಾಗಿ, ಖಾಲಿ ಇರುವ ಕ್ರಮ ಸಂಖ್ಯೆ 01 ರಿಂದ 18 ರವರೆಗಿನ ವಿವಿಧ ವೃಂದದ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಎನ್.ಹೆಚ್.ಎಂ.ನ ಷರತ್ತು ಮತ್ತು ನಿಬಂಧನೆಗಳಿಗೆ / ನವೀಕರಣದ ಷರತ್ತುಗಳಿಗೆ ಒಳಪಟ್ಟು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಅನ್ವಯಿಸುವ ರೋಸ್ಟರ್ ಕಂ ಮೆರಿಟ್ ಅನ್ವಯ ಭರ್ತಿ ಮಾಡಿಕೊಳ್ಳಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ವೆಬ್‌ಸೈಟ್: bagalkot.nic.in ರಲ್ಲಿ ಆನ್‌ಲೈನ್ ಮೂಲಕ ದಿನಾಂಕ: 03–ಜೂನ್–2025 ರಿಂದ 17–ಜೂನ್–2025 ರೊಳಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಮಾತ್ರ ಅರ್ಜಿಗಳನ್ನು ಸಲ್ಲಿಸುವುದು ಹಾಗೂ ಕೊನೆಯ ದಿನಾಂಕದ ನಂತರ ಸಲ್ಲಿಸಲಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ನೇಮಕಾತಿಗೆ ಷರತ್ತು ಮತ್ತು ನಿಬಂಧನೆಗಳು ಅನ್ವಯಿಸುತ್ತವೆ.

| ಕ್ರ. ಸಂ | ಹುದ್ದೆ ಮತ್ತು ಕಾರ್ಯಕ್ರಮ | ಕನಿಷ್ಠ ವಿದ್ಯಾರ್ಹತೆ, ಸೇವಾ ಅನುಭವ, ಗರಿಷ್ಠ ವಯೋಮಿತಿ ಹಾಗೂ ಮೀಸಲಾತಿ | ಮಾಸಿಕ ಸಂಚಿತ ವೇತನ | ಒಟ್ಟು ಹುದ್ದೆ |
|---|---|---|---|---|
| 01 | ಆಡಿಯೋಲಾಜಿಸ್ಟ್ (ಎನ್.ಪಿ.ಪಿ.ಸಿ.ಡಿ) Audiologist | **ವಿದ್ಯಾರ್ಹತೆ:** ಆಡಿಯಾಲಜಿ ಮತ್ತು ಸ್ಪೀಚ್ ಲ್ಯಾಂಗ್ವೇಜ್ ಪ್ಯಾಥೋಲಜಿಯಲ್ಲಿ ಪದವಿ ಅಥವಾ ಆರ್‌ಸಿಐ ಮಾನ್ಯತೆ ಪಡೆದ ಸಂಸ್ಥೆಯಿಂದ ಬಿ.ಎಸ್.ಸಿ (ಸ್ಪೀಚ್ ಅಂಡ್ ಹಿಯರಿಂಗ್)<br>**ಗರಿಷ್ಠ ವಯೋಮಿತಿ:** ಪ.ಜಾತಿ, ಪ.ಪಂಗಡ ಹಾಗೂ ಪ್ರವರ್ಗ I–43 ವರ್ಷ, 2A, 2B, 3A, 3B-41 ವರ್ಷ, ಇತರೆ ಸಾಮಾನ್ಯ–38 ವರ್ಷ. | ರೂ.30,000/– | 01 |
| 02 | ಆಡಿಯೋಮೆಟ್ರಿಕ್ ಅಸಿಸ್ಟೆಂಟ್ (ಎನ್.ಪಿ.ಪಿ.ಸಿ.ಡಿ) Audiometric Assistant | **ವಿದ್ಯಾರ್ಹತೆ:** ಆರ್‌ಸಿಐ ಮಾನ್ಯತೆ ಪಡೆದ ಸಂಸ್ಥೆಯಿಂದ ಶ್ರವಣ, ಭಾಷೆ ಮತ್ತು ಭಾಷಣ (ಡಿ.ಹೆಚ್.ಎಲ್.ಎಸ್) ನಲ್ಲಿ ಒಂದು ವರ್ಷದ ಡಿಪ್ಲೋಮಾ ಹೊಂದಿರಬೇಕು.<br>**ಗರಿಷ್ಠ ವಯೋಮಿತಿ:** ಪ. ಜಾತಿ, ಪ. ಪಂಗಡ ಹಾಗೂ ಪ್ರವರ್ಗ I–43 ವರ್ಷ, 2A, 2B, 3A, 3B-41 ವರ್ಷ, ಇತರೆ ಸಾಮಾನ್ಯ–38 ವರ್ಷ. | ರೂ.15,114/– | 01 |
| 03 | ಕೀಟ ಸಂಗ್ರಾಹಕ (ಎನ್.ವಿ.ಬಿ.ಡಿ.ಸಿ.ಪಿ) Insect Collector | **ವಿದ್ಯಾರ್ಹತೆ:** ಪಿ.ಯು.ಸಿ ತೇರ್ಗಡೆಯಾಗಿರಬೇಕು ಅಥವಾ ವಿಜ್ಞಾನ ವಿಷಯದಲ್ಲಿ ಪಿ.ಯು.ಸಿ ತೇರ್ಗಡೆಯಾಗಿರಬೇಕು.<br>**ಗರಿಷ್ಠ ವಯೋಮಿತಿ:** 40 ವರ್ಷ. | ರೂ.15,114/– ಹಾಗೂ ರೂ.3,200/– (ಟಿ.ಎ/ಡಿ.ಎ) | 01 |

| ಕ್ರ ಸಂ | ಹುದ್ದೆ ಮತ್ತು ಕಾರ್ಯಕ್ರಮ | ಕನಿಷ್ಠ ವಿದ್ಯಾರ್ಹತೆ, ಸೇವಾ ಅನುಭವ, ಗರಿಷ್ಠ ವಯೋಮಿತಿ ಹಾಗೂ ಮೀಸಲಾತಿ | ಮಾಸಿಕ ಸಂಚಿತ ವೇತನ | ಒಟ್ಟು ಹುದ್ದೆ |
|---|---|---|---|---|
| 04 | ತಾಲ್ಲೂಕು ಕಾರ್ಯಕ್ರಮ ವ್ಯವಸ್ಥಾಪಕರು (ಆರ್.ಸಿ.ಹೆಚ್) Block Programme Manager | **ವಿದ್ಯಾರ್ಹತೆ:** ಬಿಬಿಎಂ/ಎಂಬಿಎ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಬೇಸಿಕ್ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>**ಸೇವಾ ಅನುಭವ:** ಸರ್ಕಾರಿ ಸಂಸ್ಥೆಯಲ್ಲಿ / ಸೊಸೈಟಿಯಲ್ಲಿ ಲೆಕ್ಕಪತ್ರ/ಆಡಳಿತ ವಿಭಾಗದಲ್ಲಿ ಕನಿಷ್ಠ 04 ವರ್ಷಗಳ ಅನುಭವವಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.<br>**ಗರಿಷ್ಠ ವಯೋಮಿತಿ:** 40 ವರ್ಷ. | ರೂ.18,384/-- | 01 |
| 05 | ತಾಲ್ಲೂಕು ಆಶಾ ಮೇಲ್ವಿಚಾರಕರು (ಆಶಾ) Block Community Mobilizer | **ವಿದ್ಯಾರ್ಹತೆ:** ಜಿಎನ್‌ಎಂ/ಎಎನ್‌ಎಂ/ಬಿಎಸ್‌ಸಿ (ನರ್ಸಿಂಗ್) ಅಥವಾ ಪಬ್ಲಿಕ್ ಹೆಲ್ತ್ ಡಿಪ್ಲೋಮಾ / ಸೋಷಿಯಲ್ ವರ್ಕ್/ ಸೋಷಿಯಲ್ ಸೈನ್ಸ್‌ನಲ್ಲಿ ಪದವಿ /ಸ್ನಾತಕೋತ್ತರ ಪದವಿ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಬೇಸಿಕ್ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>**(ಮಹಿಳಾ ಅಭ್ಯರ್ಥಿಗಳಿಗೆ ಮಾತ್ರ ಹಾಗೂ ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ)**<br>**ಸೇವಾ ಅನುಭವ:** ಎರಡು ವರ್ಷಗಳ ಕಾಲ ತರಬೇತಿಯಲ್ಲಿ ಅನುಭವವಿರಬೇಕು.<br>**ಗರಿಷ್ಠ ವಯೋಮಿತಿ:** 50 ವರ್ಷ.<br>**ಮೀಸಲಾತಿ:** ಸಾ.ಅಭ್ಯರ್ಥಿ ಸಾಮಾನ್ಯ :01 ಹಾಗೂ ಪ.ಜಾತಿ ಸಾಮಾನ್ಯ:01 | ರೂ.14,187/-- | 02 |
| 06 | ಜಿಲ್ಲಾ ಎಂ & ಇ ವ್ಯವಸ್ಥಾಪಕರು (ಹೆಚ್.ಎಂ.ಐ.ಎಸ್ ಎಂ.ಸಿ.ಟಿ.ಎಸ್.) District M and E Manager | **ವಿದ್ಯಾರ್ಹತೆ:** ಸಂಖ್ಯಾಶಾಸ್ತ್ರ / ಜನಸಂಖ್ಯಾಶಾಸ್ತ್ರ / ಗಣಿತಶಾಸ್ತ್ರ / ಅರ್ಥಶಾಸ್ತ್ರ (ಸಂಖ್ಯಾಶಾಸ್ತ್ರ ವಿಷಯ) ದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಬೇಸಿಕ್ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>**ಸೇವಾ ಅನುಭವ:** ಆರೋಗ್ಯ ಕ್ಷೇತ್ರದಲ್ಲಿ ಹೆಚ್.ಎಂ.ಐ.ಎಸ್ / ಆರ್.ಸಿ.ಹೆಚ್ ಕಾರ್ಯಕ್ರಮ / ದತ್ತಾಂಶ ನಿರ್ವಹಣೆ, ವಿಶ್ಲೇಷಣೆ / ದತ್ತಾಂಶ ನಮೂದೀಕರಣ ಕಾರ್ಯಾಚರಣೆಯಲ್ಲಿ ಕನಿಷ್ಠ 01 ವರ್ಷಗಳ ಅನುಭವವಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.<br>**ಗರಿಷ್ಠ ವಯೋಮಿತಿ:** 35 ವರ್ಷ. | ರೂ.30,000/- | 01 |
| 07 | ಶ್ರವಣದೋಷವುಳ್ಳ ಮಕ್ಕಳಿಗೆ ಬೋಧಕರು (ಎನ್.ಪಿ.ಪಿ.ಸಿ.ಡಿ) Instructor for Hearing Impaired Children | **ವಿದ್ಯಾರ್ಹತೆ:** ಆರ್‌ಸಿಐ ಮಾನ್ಯತೆ ಪಡೆದ ಸಂಸ್ಥೆಯಿಂದ ಯುವ ಕಿವುಡ ಮತ್ತು ಶ್ರವಣದೋಷವುಳ್ಳವರಿಗೆ ತರಬೇತಿ ನೀಡುವಲ್ಲಿ (ಡಿ.ಟಿ.ವೈ.ಡಿ.ಹೆಚ್.ಹೆಚ್) ನಲ್ಲಿ ಡಿಪ್ಲೋಮಾ ಹೊಂದಿರಬೇಕು.<br>**ಗರಿಷ್ಠ ವಯೋಮಿತಿ:** ಪ. ಜಾತಿ, ಪ. ಪಂಗಡ ಹಾಗೂ ಪ್ರವರ್ಗ I–43 ವರ್ಷ, 2A, 2B, 3A, 3B-41 ವರ್ಷ, ಇತರೆ ಸಾಮಾನ್ಯ–38 ವರ್ಷ. | ರೂ.15,555/-- | 01 |
| 08 | ಭೌತ ಚಿಕಿತ್ಸಕರು/ ಫಿಸಿಯೋಥೆರಪಿಸ್ಟ್ (ಎನ್.ಪಿ.ಹೆಚ್.ಸಿ.ಇ) Physiotherapist | **ವಿದ್ಯಾರ್ಹತೆ:** ಫಿಸಿಯೋಥೆರಪಿಯಲ್ಲಿ ಪದವಿ (ಬಿ.ಪಿ.ಟಿ)<br>**ಸೇವಾ ಅನುಭವ:** ಆಸ್ಪತ್ರೆಯಲ್ಲಿ ಕನಿಷ್ಠ 02 ವರ್ಷಗಳ ಅನುಭವ. (ಎನ್.ಹೆಚ್.ಎಂ ಅಡಿಯಲ್ಲಿ ಕೆಲಸದ ಅನುಭವವಿದ್ದಲ್ಲಿ ಆದ್ಯತೆ.)<br>**ಗರಿಷ್ಠ ವಯೋಮಿತಿ:** 40 ವರ್ಷ. | ರೂ.25,000/ – | 01 |

| ಕ್ರ.ಸಂ | ಹುದ್ದೆ ಮತ್ತು ಕಾರ್ಯಕ್ರಮ | ಕನಿಷ್ಠ ವಿದ್ಯಾರ್ಹತೆ, ಸೇವಾ ಅನುಭವ, ಗರಿಷ್ಠ ವಯೋಮಿತಿ ಹಾಗೂ ಮೀಸಲಾತಿ | ಮಾಸಿಕ ಸಂಚಿತ ವೇತನ | ಒಟ್ಟು ಹುದ್ದೆ |
|---|---|---|---|---|
| 09 | ನೇತ್ರ ಸಹಾಯಕರು (ಆರ್.ಬಿ.ಎಸ್.ಕೆ) Opthalmic Assistant | **ವಿದ್ಯಾರ್ಹತೆ:** ಎರಡು ವರ್ಷದ ಡಿಪ್ಲೋಮಾ ಇನ್ ಆಪ್ಟೋಮೆಟ್ರಿ ಅಥವಾ ನೇತ್ರ ಸಹಾಯಕರು ಆಗಿ ಮಾನ್ಯತೆ ಪಡೆದ ಸರ್ಕಾರಿ ಆಸ್ಪತ್ರೆಗಳಲ್ಲಿ ಎನ್.ಪಿ.ಸಿ.ಬಿ ನಿಯಮಾನುಸಾರ ತರಬೇತಿ ಪಡೆದಿರಬೇಕು ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಬೇಸಿಕ್ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.<br>**ಗರಿಷ್ಠ ವಯೋಮಿತಿ:** ಪ. ಜಾತಿ, ಪ. ಪಂಗಡ ಹಾಗೂ ಪ್ರವರ್ಗ I–43 ವರ್ಷ, 2A, 2B, 3A, 3B-41 ವರ್ಷ, ಇತರೆ ಸಾಮಾನ್ಯ–38 ವರ್ಷ. | ರೂ.14,187/– | 01 |
| 10 | ಹಿರಿಯ ಚಿಕಿತ್ಸಾ ಮೇಲ್ವಿಚಾರಕರು (ಎನ್.ಟಿ.ಇ.ಪಿ) Senior Treatment Supervisor | **ವಿದ್ಯಾರ್ಹತೆ:** ವಿಜ್ಞಾನದಲ್ಲಿ ಪದವಿ, ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕಂಪ್ಯೂಟರ್ ಸಾಕ್ಷರತಾ (ಕನಿಷ್ಠ 06 ತಿಂಗಳ) ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಹಾಗೂ ಶಾಶ್ವತ ದ್ವಿಚಕ್ರ ವಾಹನ ಪರವಾನಗಿಯನ್ನು ಹೊಂದಿರಬೇಕು.<br>**ಆದ್ಯತೆ:** ನೈರ್ಮಲ್ಯ ಇನ್ಸ್‌ಪೆಕ್ಟರ್ ಕೋರ್ಸ್‌ನಲ್ಲಿ ಡಿಪ್ಲೋಮಾ<br>**ಸೇವಾ ಅನುಭವ:** ಆಸ್ಪತ್ರೆಯಲ್ಲಿ ಕನಿಷ್ಠ 02 ವರ್ಷಗಳ ಅನುಭವ. (ಎನ್.ಹೆಚ್.ಎಂ ಅಡಿಯಲ್ಲಿ ಕೆಲಸದ ಅನುಭವವಿದ್ದಲ್ಲಿ ಆದ್ಯತೆ.)<br>**ಗರಿಷ್ಠ ವಯೋಮಿತಿ:** ಪ. ಜಾತಿ, ಪ. ಪಂಗಡ ಹಾಗೂ ಪ್ರವರ್ಗ I–43 ವರ್ಷ, 2A, 2B, 3A, 3B-41 ವರ್ಷ, ಇತರೆ ಸಾಮಾನ್ಯ–38 ವರ್ಷ. | ರೂ.21,000/– | 01 |
| 11 | ವೈದ್ಯಾಧಿಕಾರಿಗಳು (ಆರ್.ಬಿ.ಎಸ್.ಕೆ) Medical Officer (RBSK-BAMS) | **ವಿದ್ಯಾರ್ಹತೆ:** ಬಿ.ಎ.ಎಂ.ಎಸ್ ಪದವಿ.<br>**ಸೇವಾ ಅನುಭವ:** ಸಾರ್ವಜನಿಕ ಆರೋಗ್ಯ/ ಸರ್ಕಾರದ ಆರೋಗ್ಯ ಕಾರ್ಯಕ್ರಮದಲ್ಲಿ / ಎನ್.ಜಿ.ಓ ಅಡಿಯಲ್ಲಿ ಕನಿಷ್ಠ 02 ವರ್ಷಗಳ ಅನುಭವ. (ಎನ್.ಹೆಚ್.ಎಂ ಅಡಿಯಲ್ಲಿ ಕೆಲಸದ ಅನುಭವವಿದ್ದಲ್ಲಿ ಆದ್ಯತೆ.)<br>**ಗರಿಷ್ಠ ವಯೋಮಿತಿ:** 45 ವರ್ಷ.<br>**ಮೀಸಲಾತಿ:** ಸಾ.ಅಭ್ಯರ್ಥಿ ಸಾಮಾನ್ಯ :01 ಹಾಗೂ ಪ.ಜಾತಿ ಸಾಮಾನ್ಯ:01 | ರೂ.46,895/– | 02 |
| 12 | ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿಗಳು (ಪ್ರಯೋಗಶಾಲಾ ತಂತ್ರಜ್ಞರು) (ಎನ್.ವಿ.ಬಿ.ಡಿ.ಸಿ.ಪಿ ತಾಯಿ ಆರೋಗ್ಯ ನಮ್ಮ ಕ್ಲಿನಿಕ್) (ಒಟ್ಟು ಹುದ್ದೆ:08) Laboratory Technicians | **ವಿದ್ಯಾರ್ಹತೆ:** ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಮತ್ತು ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯು ನಡೆಸುವ ಪ್ರಯೋಗಶಾಲಾ ತಂತ್ರಜ್ಞತೆ (ಡಿ.ಎಂ.ಎಲ್.ಟಿ) ಯಲ್ಲಿ 03 ವರ್ಷದ ಡಿಪ್ಲೋಮಾ ಕೋರ್ಸ್‌ನಲ್ಲಿ ಉತ್ತೀರ್ಣ ಹೊಂದಿರಬೇಕು. / ಪಿ.ಯು.ಸಿ (ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿ ನಡೆಸುವ 2 ವರ್ಷದ ಪ್ರಯೋಗಶಾಲಾ ತಂತ್ರಜ್ಞರ ತರಬೇತಿ ಪಡೆದಿರಬೇಕು. ಮತ್ತು ಕರ್ನಾಟಕ ರಾಜ್ಯ ಅರೆವೈದ್ಯಕೀಯ ಮಂಡಳಿಯಲ್ಲಿ ನೋಂದಣಿಯಾಗಿರಬೇಕು.<br>**ಗರಿಷ್ಠ ವಯೋಮಿತಿ:** ಪ. ಜಾತಿ, ಪ. ಪಂಗಡ ಹಾಗೂ ಪ್ರವರ್ಗ I–43 ವರ್ಷ, 2A, 2B, 3A, 3B-41 ವರ್ಷ, ಇತರೆ ಸಾಮಾನ್ಯ–38 ವರ್ಷ.<br>**ಮೀಸಲಾತಿ:** ಸಾ.ಅಭ್ಯರ್ಥಿ ಸಾಮಾನ್ಯ: 01, ಸಾ.ಅಭ್ಯರ್ಥಿ ಮಹಿಳಾ: 01, ಸಾ.ಅಭ್ಯರ್ಥಿ ಗ್ರಾಮೀಣ: 01, ಸಾ.ಅಭ್ಯರ್ಥಿ ಅಂಗವಿಕಲ: 01, ಪ.ಜಾತಿ ಸಾಮಾನ್ಯ: 01, ಪ.ಪಂಗಡ ಸಾಮಾನ್ಯ: 01, ಪ್ರ–ವರ್ಗ1 ಸಾಮಾನ್ಯ: 01, ಮತ್ತು ಪ್ರ–2ಎ ಸಾಮಾನ್ಯ: 01. | ರೂ.14,187/– | 08 |

| ಕ್ರ ಸಂ | ಹುದ್ದೆ ಮತ್ತು ಕಾರ್ಯಕ್ರಮ | ಕನಿಷ್ಠ ವಿದ್ಯಾರ್ಹತೆ, ಸೇವಾ ಅನುಭವ, ಗರಿಷ್ಠ ವಯೋಮಿತಿ ಹಾಗೂ ಮೀಸಲಾತಿ | ಮಾಸಿಕ ಸಂಚಿತ ವೇತನ | ಒಟ್ಟು ಹುದ್ದೆ |
|---|---|---|---|---|
| 13 | ಆರೋಗ್ಯ ನಿರೀಕ್ಷಣಾ ಅಧಿಕಾರಿಗಳು (ಕಿರಿಯ ಆರೋಗ್ಯ ಸಹಾಯಕರು) (ನಮ್ಮ ಕ್ಲಿನಿಕ್) (ಒಟ್ಟು ಹುದ್ದೆ:23) Junior Health Assistant | **ವಿದ್ಯಾರ್ಹತೆ:** ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿವಿದೋದ್ದೇಶ ಮೂಲ ಆರೋಗ್ಯ ಕಾರ್ಯಕರ್ತರ ತರಬೇತಿಯನ್ನು ಪಡೆದಿರಬೇಕು. / ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆವೈದ್ಯಕೀಯ ಮಂಡಳಿ ನಡೆಸುವ 3 ವರ್ಷಗಳ ಆರೋಗ್ಯ ನಿರೀಕ್ಷಕರ ಡಿಪ್ಲೋಮಾ ಹೊಂದಿರಬೇಕು. / ಪಿ.ಯು.ಸಿ (ವಿಜ್ಞಾನ) ತೇರ್ಗಡೆಯಾಗಿರಬೇಕು ಮತ್ತು ಕರ್ನಾಟಕ ಅರೆವೈದ್ಯಕೀಯ ಮಂಡಳಿ ನಡೆಸುವ 2 ವರ್ಷಗಳ ಆರೋಗ್ಯ ನಿರೀಕ್ಷಕರ ಡಿಪ್ಲೋಮಾ ಹೊಂದಿರಬೇಕು.<br>**ಗರಿಷ್ಠ ವಯೋಮಿತಿ:** ಪ. ಜಾತಿ, ಪ. ಪಂಗಡ ಹಾಗೂ ಪ್ರವರ್ಗ I–43 ವರ್ಷ, 2A, 2B, 3A, 3B-41 ವರ್ಷ, ಇತರೆ ಸಾಮಾನ್ಯ–38 ವರ್ಷ.<br>**ಮೀಸಲಾತಿ:** ಸಾ.ಅಭ್ಯರ್ಥಿ ಸಾಮಾನ್ಯ:02, ಸಾ.ಅಭ್ಯರ್ಥಿ ಮಹಿಳಾ:03, ಸಾ.ಅಭ್ಯರ್ಥಿ ಗ್ರಾಮೀಣ:03, ಸಾ.ಅಭ್ಯರ್ಥಿ ಮಾಜಿ ಸೈನಿಕ:01, ಸಾ.ಅಭ್ಯರ್ಥಿ ಅಂಗವಿಕಲ:01, ಪ.ಜಾತಿ ಸಾಮಾನ್ಯ:01, ಪ.ಜಾತಿ ಮಹಿಳಾ:01, ಪ.ಜಾತಿ ಗ್ರಾಮೀಣ:01. ಪ.ಜಾತಿ ಅಂಗವಿಕಲ:01, ಪ.ಪಂಗಡ ಸಾಮಾನ್ಯ:01, ಪ.ಪಂಗಡ ಮಾಹಿಳಾ:01, ಪ್ರ–ವರ್ಗ1 ಸಾಮಾನ್ಯ:01, ಪ್ರ–2ಎ ಸಾಮಾನ್ಯ:01, ಪ್ರ–2ಎ ಮಹಿಳಾ:01, ಪ್ರ–2ಎ ಗ್ರಾಮೀಣ:01, ಪ್ರ–2ಬಿ ಸಾಮಾನ್ಯ:01, ಪ್ರ–3ಎ ಸಾಮಾನ್ಯ:01 ಮತ್ತು ಪ್ರ–3ಬಿ ಸಾಮಾನ್ಯ:01 | (ವಲಯ–3) ರೂ.15,397/--<br><br>(ವಲಯ–4) ರೂ.14,044/-- | 03<br><br>20 |
| 14 | ಬ್ಲಾಕ್ ಎಪಿ ಡೆಮಿಯೊಲಾಜಿಸ್ಟ್ (ಐ.ಡಿ.ಎಸ್.ಪಿ) Block Epidemiologist | **ವಿದ್ಯಾರ್ಹತೆ:** ವೈದ್ಯಕೀಯ ಪದವಿ ಜೊತಗೆ ಸ್ನಾತಕೋತ್ತರ ಪದವಿ / ಡಿಪ್ಲೋಮಾ ಇನ್ ಪ್ರಿವೆಂಟಿವ್ & ಸೋಷಿಯಲ್ ಮೆಡಿಸಿನ್ / ಪಬ್ಲಿಕ್ ಹೆಲ್ತ್ / ಎಪಿಡೆಮಿಯೊಲಾಜಿ ಅಥವಾ ಎಂ.ಎಸ್.ಸಿ ಇನ್ ಲೈಫ್ ಸೈನ್ಸ್ ಅಥವಾ ಎಂ.ಎಸ್.ಸಿ ಇನ್ ಎಪಿಡೆಮಿಯೊಲಾಜಿ<br>**ಸೇವಾ ಅನುಭವ:** ಸಾರ್ವಜನಿಕ ಆರೋಗ್ಯ/ ಸರ್ಕಾರದ ಆರೋಗ್ಯ ಕಾರ್ಯಕ್ರಮದಲ್ಲಿ 02 ವರ್ಷಗಳ ಅನುಭವ.<br>**ಗರಿಷ್ಠ ವಯೋಮಿತಿ:** 45 ವರ್ಷ. | ರೂ.30,000/-- | 01 |
| 15 | ಆಪ್ತ ಸಮಾಲೋಚಕರು (ಎಸ್.ಪಿ.ಎಸ್.ಸಿ.ಡಿ) Councellor | **ವಿದ್ಯಾರ್ಹತೆ:** ಸಮಾಜ ವಿಜ್ಞಾನ ವಿಷಯದಲ್ಲಿ ಪದವಿ ಅಥವಾ ಆಪ್ತ ಸಲಹೆ / ಆರೋಗ್ಯ ಶಿಕ್ಷಣ / ಸಮೂಹ ಸಂವಹನದಲ್ಲಿ ಪದವಿ / ಡಿಪ್ಲೋಮಾ. (ಆದ್ಯತೆ: ಆಪ್ತ ಸಲಹೆ ನೀಡುವುದರಲ್ಲಿ ಡಿಪ್ಲೋಮಾ / ಪದವಿ)<br>**ಸೇವಾ ಅನುಭವ:** ಸಾರ್ವಜನಿಕ ಆರೋಗ್ಯ/ ಸರ್ಕಾರದ ಆರೋಗ್ಯ ಕಾರ್ಯಕ್ರಮದಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದ 02 ವರ್ಷಗಳ ಅನುಭವ. (ಎನ್.ಹೆಚ್.ಎಂ ಅಡಿಯಲ್ಲಿ ಕೆಲಸದ ಅನುಭವವಿದ್ದಲ್ಲಿ ಆದ್ಯತೆ.)<br>**ಗರಿಷ್ಠ ವಯೋಮಿತಿ:** 45 ವರ್ಷ. | ರೂ.14,558/-- | 01 |

| ಕ್ರ. ಸಂ | ಹುದ್ದೆ ಮತ್ತು ಕಾರ್ಯಕ್ರಮ | ಕನಿಷ್ಠ ವಿದ್ಯಾರ್ಹತೆ, ಸೇವಾ ಅನುಭವ, ಗರಿಷ್ಠ ವಯೋಮಿತಿ ಹಾಗೂ ಮೀಸಲಾತಿ | ಮಾಸಿಕ ಸಂಚಿತ ವೇತನ | ಒಟ್ಟು ಹುದ್ದೆ |
|---|---|---|---|---|
| 16.1. | ಶುಶ್ರೂಷಣಾ ಅಧಿಕಾರಿಗಳು (ಸ್ಟಾಫ್ ನರ್ಸ್ ಬಿ.ಎಸ್.ಸಿ) (ತಾಯಿ ಆರೋಗ್ಯ ಆರ್.ಬಿ.ಎಸ್.ಕೆ) ಒಟ್ಟು ಹುದ್ದೆ:11) Staff Nurse (B Sc) | **ವಿದ್ಯಾರ್ಹತೆ:** ಮಾನ್ಯತೆ ಪಡೆದಿರುವ ಸಂಸ್ಥೆಯಿಂದ ಬಿ.ಎಸ್.ಸಿ ನರ್ಸಿಂಗ್ ಪದವಿ ಮತ್ತು ವ್ಯಾಲಿಡಿಟಿ ಅವಧಿ ಚಾಲ್ತಿಯಲ್ಲಿರುವ ಕೆ.ಎನ್.ಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. **ಸೇವಾ ಅನುಭವ:** ಸಾರ್ವಜನಿಕ ಆರೋಗ್ಯ/ ಸರ್ಕಾರದಲ್ಲಿ 02 ವರ್ಷಗಳ ಅನುಭವ. (ಎನ್.ಹೆಚ್.ಎಂ ಅಡಿಯಲ್ಲಿ ಕೆಲಸದ ಅನುಭವವಿದ್ದಲ್ಲಿ ಆದ್ಯತೆ.) **ಗರಿಷ್ಠ ವಯೋಮಿತಿ:** 45 ವರ್ಷ. **ಮೀಸಲಾತಿ:** ಸಾ.ಅಭ್ಯರ್ಥಿ ಸಾಮಾನ್ಯ:01, ಸಾ.ಅಭ್ಯರ್ಥಿ ಮಹಿಳಾ:02, ಸಾ.ಅಭ್ಯರ್ಥಿ ಗ್ರಾಮೀಣ:01, ಸಾ.ಅಭ್ಯರ್ಥಿ ಅಂಗವಿಕಲ:01, ಪ.ಜಾತಿ ಸಾಮಾನ್ಯ:01, ಪ.ಜಾತಿ ಮಹಿಳಾ:01, ಪ.ಪಂಗಡ ಸಾಮಾನ್ಯ:01, ಪ್ರ-ವರ್ಗ1 ಸಾಮಾನ್ಯ:01, ಪ್ರ-2ಎ ಸಾಮಾನ್ಯ:01 ಮತ್ತು ಪ್ರ-2ಬಿ ಸಾಮಾನ್ಯ:01. | ರೂ.14,187/- | 11 |
| 16.2. | ಶುಶ್ರೂಷಣಾ ಅಧಿಕಾರಿಗಳು (ಸ್ಟಾಫ್ ನರ್ಸ್ ಜಿ.ಎನ್.ಎಂ) (ಎನ್.ಪಿ.ಹೆಚ್.ಸಿ.ಇ ಎನ್.ಪಿ.ಎನ್.ಸಿ.ಡಿ ಎನ್.ಪಿ.ಪಿ.ಸಿ ಎನ್.ಎಂ.ಹೆಚ್.ಪಿ ಎನ್.ಆರ್.ಸಿ ಮಕ್ಕಳ ಆರೋಗ್ಯ ನಮ್ಮ ಕ್ಲಿನಿಕ್) ಒಟ್ಟು ಹುದ್ದೆ:24) Staff Nurse (GNM) | **ವಿದ್ಯಾರ್ಹತೆ:** ಮಾನ್ಯತೆ ಪಡೆದಿರುವ ಸಂಸ್ಥೆಯಿಂದ ಜಿ.ಎನ್.ಎಂ ಮತ್ತು ವ್ಯಾಲಿಡಿಟಿ ಅವಧಿ ಚಾಲ್ತಿಯಲ್ಲಿರುವ ಕೆ.ಎನ್.ಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. **ಸೇವಾ ಅನುಭವ:** ಸಾರ್ವಜನಿಕ ಆರೋಗ್ಯ/ ಸರ್ಕಾರದಲ್ಲಿ 02 ವರ್ಷಗಳ ಅನುಭವ. (ಎನ್.ಹೆಚ್.ಎಂ ಅಡಿಯಲ್ಲಿ ಕೆಲಸದ ಅನುಭವವಿದ್ದಲ್ಲಿ ಆದ್ಯತೆ.) **ಗರಿಷ್ಠ ವಯೋಮಿತಿ:** 40 ವರ್ಷ. **ಮೀಸಲಾತಿ:** ಸಾ.ಅಭ್ಯರ್ಥಿ ಸಾಮಾನ್ಯ:02, ಸಾ.ಅಭ್ಯರ್ಥಿ ಮಹಿಳಾ:04, ಸಾ.ಅಭ್ಯರ್ಥಿ ಗ್ರಾಮೀಣ:03, ಸಾ.ಅಭ್ಯರ್ಥಿ ಮಾ ಸೈನಿಕ:01, ಸಾ.ಅಭ್ಯರ್ಥಿ ಅಂಗವಿಕಲ:01, ಪ.ಜಾತಿ ಸಾಮಾನ್ಯ:01, ಪ.ಜಾತಿ ಮಹಿಳಾ:01, ಪ.ಜಾತಿ ಗ್ರಾಮೀಣ:01. ಪ.ಜಾತಿ ಅಂಗವಿಕಲ:01, ಪ.ಪಂಗಡ ಸಾಮಾನ್ಯ:01, ಪ.ಪಂಗಡ ಮಹಿಳಾ:01, ಪ್ರ-ವರ್ಗ1 ಸಾಮಾನ್ಯ:01, ಪ್ರ-2ಎ ಸಾಮಾನ್ಯ:01, ಪ್ರ-2ಎ ಮಹಿಳಾ:01, ಪ್ರ-2ಎ ಗ್ರಾಮೀಣ:01, ಪ್ರ-2ಬಿ ಸಾಮಾನ್ಯ:01, ಪ್ರ-3ಎ ಸಾಮಾನ್ಯ:01 ಮತ್ತು ಪ್ರ-3ಬಿ ಸಾಮಾನ್ಯ:01. | ರೂ.14,187/- | 24 |
| 17 | ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ (ಎಲ್‌ಹೆಚ್‌ವಿ) (ಎನ್.ಯು.ಹೆಚ್.ಎಂ) Senior LHV / PHCO | **ವಿದ್ಯಾರ್ಹತೆ:** ಹಿರಿಯ ಮಹಿಳಾ ಆರೋಗ್ಯ ಸುರಕ್ಷಾಧಿಕಾರಿ ಹುದ್ದೆಗೆ ಅರ್ಹ ತರಬೇತಿ ಹೊಂದಿದ ಅಭ್ಯರ್ಥಿಗಳು. ಸದರಿ ಅಭ್ಯರ್ಥಿಗಳು ದೊರಕದಿದ್ದಲ್ಲಿ ನಿವೃತ್ತಿಯಾಗಿ ಕರ್ತವ್ಯ ನಿರ್ವಹಿಸಲು ಸಶಕ್ತರಾಗಿರುವ ಮಹಿಳಾ ಅಭ್ಯರ್ಥಿಗಳು. **ಗರಿಷ್ಠ ವಯೋಮಿತಿ:** 65 ವರ್ಷ. **ಮೀಸಲಾತಿ:** ಸಾ.ಅಭ್ಯರ್ಥಿ ಸಾಮಾನ್ಯ :01 ಹಾಗೂ ಪ.ಜಾತಿ ಸಾಮಾನ್ಯ:01 | ರೂ.12,600/- | 02 |
| 18 | ಇಂಜಿನಿಯರ್ – ಸಿವಿಲ್ (ಐ.ಸಿ.ಯು /ಹೆಚ್.ಡಿ.ಯು) Engineer (Civil) | **ವಿದ್ಯಾರ್ಹತೆ:** ಸಿವಿಲ್/ಇಲೆಕ್ಟ್ರಿಕಲ್/ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ / ಬಿ.ಟೆಕ್. **ಸೇವಾ ಅನುಭವ:** ಸಾರ್ವಜನಿಕ ಆರೋಗ್ಯ/ ಸರ್ಕಾರದ ಆರೋಗ್ಯ ಕಾರ್ಯಕ್ರಮದಲ್ಲಿ ಆಸ್ಪತ್ರೆ ನಿರ್ವಹಣೆಯಲ್ಲಿ 02 ವರ್ಷಗಳ ಅನುಭವ. (ಎನ್.ಹೆಚ್.ಎಂ ಅಡಿಯಲ್ಲಿ ಕೆಲಸದ ಅನುಭವವಿದ್ದಲ್ಲಿ ಆದ್ಯತೆ.) **ಗರಿಷ್ಠ ವಯೋಮಿತಿ:** 45 ವರ್ಷ. | ರೂ.25,000/- | 01 |

ಕ್ರಮ ಸಂಖ್ಯೆ 19 ರಿಂದ 23 ರವರೆಗಿನ ಎಂ.ಬಿ.ಬಿ.ಎಸ್ ವೈದ್ಯಾಧಿಕಾರಿಗಳ ಹಾಗೂ ತಜ್ಞ ವೈದ್ಯರುಗಳ ಹುದ್ದೆಗಳು ಭರ್ತಿಯಾಗುವವರೆಗೂ ನೇರ ಸಂದರ್ಶನವನ್ನು ಪ್ರತಿ ದಿನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯದಲ್ಲಿ ನಡೆಸಲಾಗುವುದು. ಆಸಕ್ತ ಎಂ.ಬಿ.ಬಿ.ಎಸ್ ವೈದ್ಯರುಗಳು ಮತ್ತು ತಜ್ಞ ವೈದ್ಯರುಗಳು ಅಗತ್ಯ ದಾಖಲಾತಿಯೊಂದಿಗೆ ಕಛೇರಿ ಸಮಯದಲ್ಲಿ ನೇರ ಸಂದರ್ಶನಕ್ಕೆ ಹಾಜರಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**ಕ್ರಮ ಸಂಖ್ಯೆ 19 ರಿಂದ 23 ರವರೆಗಿನ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವ ಅವಶ್ಯಕತೆಯಿರುವುದಿಲ್ಲ.**

| ಕ್ರ ಸಂ | ಹುದ್ದೆ ಮತ್ತು ಕಾರ್ಯಕ್ರಮ | ಕನಿಷ್ಠ ವಿದ್ಯಾರ್ಹತೆ, ಸೇವಾ ಅನುಭವ, ಗರಿಷ್ಠ ವಯೋಮಿತಿ ಹಾಗೂ ಮೀಸಲಾತಿ | ಮಾಸಿಕ ಸಂಚಿತ ವೇತನ | ಒಟ್ಟು ಹುದ್ದೆ |
|---|---|---|---|---|
| 19 | ವೈದ್ಯಾಧಿಕಾರಿಗಳು (ಮಕ್ಕಳ ಆರೋಗ್ಯ | **ವಿದ್ಯಾರ್ಹತೆ:** ಅಂಗೀಕೃತ ವಿಶ್ವ ವಿದ್ಯಾಲಯದಿಂದ ಎಂ.ಬಿ.ಬಿ.ಎಸ್ ಪದವಿ ಪಡೆದಿರಬೇಕು. 1 ವರ್ಷದ ಇಂಟರ್ನ್‌ಶಿಪ್‌ನ್ನು ಕಡ್ಡಾಯವಾಗಿ ಪೂರ್ಣಗೋಳಿಸಿರಬೇಕು. **ಗರಿಷ್ಠ ವಯೋಮಿತಿ:** 60 ವರ್ಷ. | ರೂ.75,000/- | 02 |
| | ಇ-ಆಸ್ಪತ್ರೆ | | ರೂ.75,000/- | 02 |
| | ಐ.ಸಿ.ಯು | | ರೂ.75,000/- | 01 |
| | ಹೆಚ್.ಡಿ.ಯು | | ರೂ.75,000/- | 04 |
| | ತಾಯಿ ಆರೋಗ್ಯ | | ರೂ.75,000/- | 04 |
| | ಎನ್.ಪಿ.ಎನ್.ಸಿ.ಡಿ | | ರೂ.75,000/- | 01 |
| | ಎನ್.ಟಿ.ಇ.ಪಿ<br>ನಮ್ಮ ಕ್ಲಿನಿಕ್ | | ರೂ.75,000/- | .22 |
| | ಎನ್.ಯು.ಹೆಚ್.ಎಂ (ಒಟ್ಟು ಹುದ್ದೆ:41) | | ರೂ.75,000/- | 05 |
| 20 | ತಜ್ಞ ವೈದ್ಯರು (ಕನ್ಸಲ್ಟಂಟ್ ಮೆಡಿಸಿನ್) (ಎನ್.ಪಿ.ಹೆಚ್.ಸಿ.ಇ ಎನ್.ಪಿ.ಸಿ.ಡಿ.ಸಿ.ಎಸ್ ಎನ್.ಪಿ.ಪಿ.ಸಿ) (ಒಟ್ಟು ಹುದ್ದೆ:03) | **ವಿದ್ಯಾರ್ಹತೆ:** ಅಂಗೀಕೃತ ವಿಶ್ವ ವಿದ್ಯಾಲಯದಿಂದ ಎಂ.ಬಿ.ಬಿ.ಎಸ್ ಪದವಿ ಮತ್ತು ಎಂ.ಡಿ ಸ್ನಾತಕೋತ್ತರ ಪದವಿ ಪಡೆದಿರಬೇಕು. (ತಜ್ಞ ವೈದ್ಯರ ಹುದ್ದೆಗೆ (ಎದುರು ಹುದ್ದೆಗೆ) ಎಂ.ಬಿ.ಬಿ.ಎಸ್ ವೈದ್ಯರು ನೇಮಕಗೊಂಡ ಸಂದರ್ಭದಲ್ಲಿ ಮಾಸಿಕ ವೇತನ 46,895/- ನೀಡಲಾಗುವುದು.) (ಎನ್.ಪಿ.ಪಿ.ಸಿ ಕಾರ್ಯಕ್ರಮದ ತಜ್ಞ ವೈದ್ಯರ ಹುದ್ದೆಗೆ ಮೆಡಿಸಿನ್ / ಅನಸ್ತಿಷಿಯಾ / ರೇಡಿಯೋಥೆರಪಿಯಲ್ಲಿ ಡಿಪ್ಲೋಮಾ / ಸ್ನಾತಕೋತ್ತರ ಪದವಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.) **ಗರಿಷ್ಠ ವಯೋಮಿತಿ:** 50 ವರ್ಷ. | ರೂ.1,40,000/- | 03 |
| 21 | ಮಕ್ಕಳ ತಜ್ಞರು (ತಾಯಿ ಆರೋಗ್ಯ) | **ವಿದ್ಯಾರ್ಹತೆ:** ಅಂಗೀಕೃತ ವಿಶ್ವ ವಿದ್ಯಾಲಯದಿಂದ ಡಿ.ಸಿ.ಹೆಚ್ / ಡಿ.ಎನ್.ಬಿ (ಮಕ್ಕಳ ಆರೋಗ್ಯ) / ಎಂ.ಡಿ (ಪಿಡಿಯಾಟ್ರಿಕ್ಸ್) **ಗರಿಷ್ಠ ವಯೋಮಿತಿ:** 45 ವರ್ಷ. | ರೂ.1,40,000/- | 01 |
| 22 | ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು (ಆರ್.ಸಿ.ಹೆಚ್) | **ವಿದ್ಯಾರ್ಹತೆ:** ಡಿ.ಜಿ.ಓ / ಡಿ.ಎನ್.ಬಿ / ಎಂ.ಡಿ (ಓ.ಬಿ.ಜಿ) ಸ್ನಾತಕೋತ್ತರ ಪದವಿ ಪಡೆದಿರಬೇಕು. **ಗರಿಷ್ಠ ವಯೋಮಿತಿ:** 45 ವರ್ಷ. | ರೂ.1,40,000/- | 01 |
| 23 | ಅರವಳಿಕೆ ತಜ್ಞರು (ಆರ್.ಸಿ.ಹೆಚ್) | **ವಿದ್ಯಾರ್ಹತೆ:** ಡಿ.ಎ / ಡಿ.ಎನ್.ಬಿ / ಎಂ.ಡಿ (ಅನಸ್ಥೇಷಿಯ) ಸ್ನಾತಕೋತ್ತರ ಪದವಿ ಪಡೆದಿರಬೇಕು. **ಗರಿಷ್ಠ ವಯೋಮಿತಿ:** 45 ವರ್ಷ. | ರೂ.1,40,000/- | 01 |

**ಷರತ್ತು ಮತ್ತು ನಿಬಂಧನೆಗಳು:**

1. ಅರ್ಜಿ ಸಲ್ಲಿಸಲು ಯಾವುದೇ ಶುಲ್ಕವಿರುವುದಿಲ್ಲ. ಅರ್ಜಿಗಳನ್ನು ಕೇವಲ ಆನ್‌ಲೈನ್ ಮೂಲಕ ಸಲ್ಲಿಸುವುದು. ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 03-ಜೂನ್-2025 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17-ಜೂನ್-2025. ಅರ್ಜಿಗಳನ್ನು ಆನ್‌ಲೈನ್ ಹೊರತು ಪಡಿಸಿ ಇತರೆ ಯಾವುದೇ ಮೂಲಗಳಿಂದ ಸಲ್ಲಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

2. ದಿನಾಂಕ: 03-ಜೂನ್-2025 ರಂದು ಎಲ್ಲಾ ವರ್ಗದವರ ವಯೋಮಿತಿ 18 ವರ್ಷ ಪೂರ್ಣಗೊಂಡಿರತಕ್ಕದ್ದು ಹಾಗೂ ಆಯಾ ಹುದ್ದೆಗಳಿಗೆ ನಿದಗಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ದಿನಾಂಕ: 03-ಜೂನ್-2025 ರಂದು ಮೀರಿರಬಾರದು.
3. ಮಾರ್ಗಸೂಚಿ ಅನುಸಾರ ಆಯಾ ಹುದ್ದೆಗಳಿಗೆ ನಿಗದಿ ಪಡಿಸಿರುವ ವಯೋಮಿತಿಯನ್ನು ಹಾಗೂ ಮಾರ್ಗಸೂಚಿಯಲ್ಲಿ ವಯೋಮಿತಿ ನಿಗದಿಯಾಗದ ಹುದ್ದೆಗಳಿಗೆ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024 ಬೆಂಗಳೂರು, ದಿನಾಂಕ: 10-09-2024 ರನ್ವಯ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಕನಿಷ್ಠ 18 ವರ್ಷ, ಪ. ಜಾತಿ, ಪ. ಪಂಗಡ ಹಾಗೂ ಪ್ರವರ್ಗ-1 ಅಭ್ಯರ್ಥಿಗಳಿಗೆ: ಗರಿಷ್ಠ 43 ವರ್ಷ, 2ಎ, 2ಬಿ, 3ಎ ಹಾಗೂ 3ಬಿ ಅಭ್ಯರ್ಥಿಗಳಿಗೆ: ಗರಿಷ್ಠ 41 ವರ್ಷ ಹಾಗೂ ಇತರೆ ಸಾಮಾನ್ಯ ಅಭ್ಯರ್ಥಿಗಳಿಗೆ: ಗರಿಷ್ಠ 38 ವರ್ಷ ವಯೋಮಿತಿಯನ್ನು ನಿಗದಿಪಡಿಸಲಾಗಿದೆ.
4. ಸದರಿ ಹುದ್ದೆಗಳಿಗೆ ತಪ್ಪು ಮಾಹಿತಿ/ದಾಖಲೆಗಳನ್ನು ಹಾಜರುಪಡಿಸಿ ನೇಮಕಾತಿ ಹೊಂದಿರುವುದು ದೃಡಪಟ್ಟಲ್ಲಿ ಯಾವುದೇ ಪೂರ್ವ ಮಾಹಿತಿ ನೀಡದೆ ನೇಮಕಾತಿ ರದ್ದು ಪಡಿಸಿ ಅಂತಹ ಅಭ್ಯರ್ಥಿಯ ವಿರುದ್ಧ ಕ್ರಿಮಿನಲ್ ದಾವೆ ಹೂಡಲಾಗುವುದು.
5. ವಿವಿಧ ಹುದ್ದೆಗಳಿಗೆ ಒಬ್ಬನೇ ಅಭ್ಯರ್ಥಿಯು ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಆನ್‌ಲೈನ್ ಮೂಲಕವೇ ಅರ್ಜಿಯನ್ನು ಸಲ್ಲಿಸಬೇಕು.
6. ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ಸಂಪೂರ್ಣ ತಾತ್ಕಾಲಿಕ ಹುದ್ದೆಗಳಾಗಿದ್ದು, ಕಾಲ ಕಾಲಕ್ಕೆ ಸರ್ಕಾರದಿಂದ / ಎನ್.ಹೆಚ್.ಎಂ ನಿರ್ದೇಶನಾಲಯದಿಂದ ಹೊರಡಿಸುವ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತವೆ. ಹಾಗೂ ರೋಸ್ಟರ್ ಕಂ ಮೆರಿಟ್ ಆಧಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.
7. ಆಯ್ಕೆಯನ್ನು ಯಾವುದೇ ಸಮಯದಲ್ಲಿ ಯಾವುದೇ ಕಾರಣಗಳಿಲ್ಲದೇ ಪರ್ಯಾವಸಾನಗೊಳಿಸುವ ಹಕ್ಕನ್ನು, 92 ಹುದ್ದೆಗಳು ನ್ಯಾಯಾಲಯದ ಪ್ರಕರಣದಲ್ಲಿದ್ದು, ಖಾಲಿಯಿರುವ ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚು / ಕಡಿಮೆ ಹಾಗೂ ಯಾವುದೇ ಸಂದರ್ಭದಲ್ಲಿ ರದ್ದುಗೊಳಿಸುವ ಹಾಗೂ ಎನ್.ಹೆಚ್.ಎಂ.ನ ಮಾರ್ಗಸೂಚಿ ಅನುಸಾರ ಯಾವುದೇ ನಿರ್ಧಾರವನ್ನು ಕೈಗೊಳ್ಳುವ ಸಂಪೂರ್ಣ ಅಧಿಕಾರವನ್ನು ಜಿಲ್ಲಾ ಆರೋಗ್ಯ ಸಂಘಕ್ಕೆ ಕಾಯ್ದಿರಿಸಲಾಗಿದೆ.
8. ಗುತ್ತಿಗೆ ಆಧಾರದ ನೇಮಕಾತಿಯು ತಾತ್ಕಾಲಿಕವಾಗಿದ್ದು, ಪ್ರತಿ ವರ್ಷದ ಮಾರ್ಚ್ 31ಕ್ಕೆ ಕೊನೆಗೊಳ್ಳುತ್ತದೆ. ಒಂದು ದಿನದ ವಿರಾಮದ ನಂತರ ಮುಂದಿನ ಸಾಲಿನ ಆರ್.ಓ.ಪಿ ಅನುಮೋದನೆಯನ್ವಯ / ನವೀಕರಣದ ಷರತ್ತುಗಳನ್ವಯ ಹಾಗೂ ಕಾರ್ಯಕ್ಷಮತೆಯ ಆಧಾರದ ಮೇಲೆ ಮುಂದುವರೆದು ಗುತ್ತಿಗೆ ಅವಧಿ ಗರಷ್ಠ 01 ವರ್ಷಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಈ ಗುತ್ತಿಗೆ ಆಧಾರದ ಸೇವೆಯ ಆಯ್ಕೆಯನ್ನು ನಿರ್ಧಿಷ್ಠ ಸ್ಥಳಗಳಿಗೆ ಮಾಡಿಕೊಳ್ಳುವುದರಿಂದ ಯಾವುದೇ ಸ್ಥಳಕ್ಕೆ ವರ್ಗಾವಣೆಗೆ / ಪರಸ್ಪರ ವರ್ಗಾವಣೆಗೆ ಅಥವಾ ನಿಯೋಜನೆಗೆ ಅವಕಾಶವಿರುವುದಿಲ್ಲ.
9. ಗುತ್ತಿಗೆ ಆಧಾರದ ಮೇಲೆ ಆಯ್ಕೆಗೊಂಡ ಅಭ್ಯರ್ಥಿಗಳು ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತ ಉಪದಾನ, ವೇತನ ಶ್ರೇಣಿ ಅಥವಾ ಇನ್ನಿತರ ಯಾವುದೇ ಭತ್ಯೆ / ಸೌಲಭ್ಯಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ ಹಾಗೂ ಈ ಕುರಿತು ನ್ಯಾಯಾಲಯದಲ್ಲಿ ಪ್ರಶ್ನಿಸುವಂತಿಲ್ಲ.
10. ಗುತ್ತಿಗೆ ಆಧಾರದ ಮೇಲೆ ಆಯ್ಕೆ ಹೊಂದಿದ ಅಭ್ಯರ್ಥಿಗಳು ಕೇಂದ್ರ ಸ್ಥಾನದಲ್ಲಿ ಕಡ್ಡಾಯವಾಗಿ ವಾಸಮಾಡತಕ್ಕದ್ದು ಹಾಗೂ ಕರ್ತವ್ಯಕ್ಕೆ ಹಾಜರಾಗುವ ಮೊದಲು ಷರತ್ತುಗಳನ್ನು ಮತ್ತು ನಿಬಂಧನೆಗಳನ್ನು ಒಪ್ಪಿಕೊಂಡಿರುವಂತೆ ರೂ.500/-ಗಳ ಛಾಪಾಕಾಗದದಲ್ಲಿ ಮುಚ್ಚಳಿಕೆಯನ್ನು ಜಿಲ್ಲಾ ಆರೋಗ್ಯ ಸಂಘದೊಂದಿಗೆ ಬರೆದುಕೊಡತಕ್ಕದ್ದು.
11. ಗ್ರಾಮೀಣ ಅಭ್ಯರ್ಥಿಗಳು 01 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಭಾಗದ ಶಾಲೆಗಳಲ್ಲಿ ವ್ಯಾಸಂಗ ಮಾಡಿರುವ ಗ್ರಾಮೀಣ ಅಭ್ಯರ್ಥಿ ಪ್ರಮಾಣಪತ್ರವನ್ನು ಹಾಗೂ ಕನ್ನಡ ಮಾಧ್ಯಮ ಅಭ್ಯರ್ಥಿಗಳು 01 ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಕನ್ನಡ ಮಾಧ್ಯಮ ಪ್ರಮಾಣಪತ್ರವನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು.

12. ಪ್ರಸ್ತುತ ಆಯ್ಕೆಯಾದ ಅಭ್ಯರ್ಥಿಗಳು ನಿಗದಿತ ಅವಧಿಯೊಳಗೆ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಹಾಗೂ ಆಯಾ ಹುದ್ದೆಗಳಿಗೆ ನೇಮಕಾತಿ ಆದೇಶ ನೀಡಿದ ದಿನಾಂಕದಿಂದ ಮುಂದಿನ ಆರು ತಿಂಗಳಲ್ಲಿ ಪ್ರಸ್ತುತ ಅಧಿಸೂಚಿಸಲಾದ ಹುದ್ದೆಗಳು ಖಾಲಿಯಾದಲ್ಲಿ, ಸದರಿ ನೇಮಕಾತಿಯಲ್ಲಿ ಆಯ್ಕೆಯಾಗದೇ ರೋಷ್ಟರ್ ಕಂ ಮೆರಿಟ್ ಅನುಸಾರ ಕಾಯ್ದಿರಿಸಲಾದ (Waiting List) ಅಭ್ಯರ್ಥಿಗಳನ್ನು ಪರಿಗಣಿಸಿ, ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಯನ್ನು ಪಡೆದು ನೇಮಕಾತಿ ಮಾಡಿಕೊಳ್ಳಲಾಗುವುದು.
13. ಜಾತಿ, ಗ್ರಾಮೀಣ, ಕನ್ನಡ ಮಾಧ್ಯಮ, ಮಾಜಿ ಸೈನಿಕ, ಯೋಜನಾ ನಿರಾಶ್ರಿತರು, ಅಂಗವಿಕಲ ಹಾಗೂ ಇತರೆ ಮೀಸಲಾತಿ ಕೋರುವ ಅಭ್ಯರ್ಥಿಗಳು ಸಂಬಂಧ ಪಟ್ಟ ಇಲಾಖೆಯಿಂದ ನೀಡಿರುವ ದಾಖಲೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು ಹಾಗೂ ಸದರಿ ಪ್ರಮಾಣ ಪತ್ರವು ವ್ಯಾಲಿಡಿಟಿ ಅವಧಿಯಲ್ಲಿರಬೇಕು. ವ್ಯಾಲಿಡಿಟಿ ಅವಧಿ ಮುಗಿದ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ಪಕ್ಷದಲ್ಲಿ ಅಂತಹ ಅಭ್ಯರ್ಥಿಯನ್ನು ಪರಿಗಣಿಸಲಾಗುವುದಿಲ್ಲ.
14. ರಾಜ್ಯ ಮಟ್ಟದಿಂದ ಕಡ್ಡಾಯ ಗ್ರಾಮಿಣ ಸೇವೆಗೆ ವೈದ್ಯರು ಮತ್ತು ತಜ್ಞವೈದ್ಯರುಗಳು ಬಂದಾಗ ಎನ್.ಹೆಚ್.ಎಂ ಅಡಿಯಲ್ಲಿ ನೇಮಕಾತಿಗೊಂಡಿರುವ ವೈದ್ಯರು ಮತ್ತು ತಜ್ಞ ವೈದ್ಯರುಗಳನ್ನು ತಕ್ಷಣವೇ ಕರ್ತವ್ಯದಿಂದ ಬಿಡುಗಡೆಗಳಿಸುವ ಷರತ್ತುನ್ನು ವಿಧಿಸಿ ನಿಯೋಜನೆ ಮಾಡಲಾಗುವುದು.
15. ಅಭಿಯಾನ ನಿರ್ದೇಶಕರು, ಎನ್.ಹೆಚ್.ಎಂ, ಬೆಂಗಳೂರು ಇವರ ಪತ್ರ ಸಂಖ್ಯೆ e-H/Computer Literate/72/2019-20 ದಿ:10-03-2021ರ ಪ್ರಕಾರ, ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಯಿಂದ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಎಂ.ಎಸ್ ಆಫಿಸ್, ಕನ್ನಡ ಛಾಪಿಸುವಿಕೆ (Kannada Typing) ವೆಬ್ ಟೂಲಿಂಗ್ ಮತ್ತು ಇಂಟರ್‌ನೆಟ್ ಇತ್ಯಾದಿಗಳ ಬಳಕೆಗೆ ಬೇಕಾಗುವ ಕಂಪ್ಯೂಟರ್ ಬೇಸಿಕ್ ಕೋರ್ಸ್‌ನಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು.
16. ಸದರಿ ನೇಮಕಾತಿ ಪ್ರಕಟಣೆಗೆ (ಮೂಲ ದಾಖಲಾತಿಗಳ ಪರಿಶೀಲನೆ, ತಾತ್ಕಾಲಿಕ ಆಯ್ಕೆ ಪಟ್ಟಿ ಅಂತಿಮ ಆಯ್ಕೆ ಪಟ್ಟಿ ಹಾಗೂ ಇತರೆ) ಸಂಬಂಧಿಸಿದ ವಿವರಗಳನ್ನು bagalkot.nic.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಬಾಗಲಕೋಟೆ. ಇಲ್ಲಿ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಸಂಘ ಮತ್ತು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು,
ಬಾಗಲಕೋಟೆ ಜಿಲ್ಲೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಅಧಿಕಾರಿಗಳು, ಬಾಗಲಕೋಟ

ಪ್ರತಿಯನ್ನು:

1. ಮಾನ್ಯ ಅಭಿಯಾನ ನಿರ್ದೇಶಕರು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು. ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜಿಲ್ಲಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ. ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
3. ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್, ಬಾಗಲಕೋಟೆ ಜಿಲ್ಲೆ. ರವರ ಅವಗಾಹನೆಗೆ ಸಲ್ಲಿಸುತ್ತಾ ತಮ್ಮ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
4. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆ.ಕು.ಕ ಸೇವೆಗಳು, ಬೆಂಗಳೂರು. ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮುಖ್ಯ ಆಡಳಿತಾಧಿಕಾರಿಗಳು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು. ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಜಿಲ್ಲಾ ನೋಡಲ್ ಅಧಿಕಾರಿಗಳು, ಬಾಗಲಕೋಟೆ ಜಿಲ್ಲೆ. ರವರ ಮಾಹಿತಿಗಾಗಿ ಸಲ್ಲಿಸಿದೆ.
7. ರಾಜ್ಯ ಕಾರ್ಯಕ್ರಮ ವ್ಯವಸ್ಥಾಪಕರು (ಎನ್.ಹೆಚ್.ಎಂ), ಆ.ಕು.ಕ ಸೇವೆಗಳು, ಬೆಂಗಳೂರು. ರವರ ಮಾಹಿತಿಗಾಗಿ ಸಲ್ಲಿಸಿದೆ.
8. ರಾಜ್ಯದ ಎಲ್ಲಾ ಉಪನಿರ್ದೇಶಕರು, ಆ.ಕು.ಕ ಸೇವೆಗಳು, ಬೆಂಗಳೂರು. ರವರ ಮಾಹಿತಿಗಾಗಿ ಸಲ್ಲಿಸಿದೆ.

9. ಜಿಲ್ಲಾ ಮಾಹಿತಿ ಮತ್ತು ತಂತ್ರಜ್ಞಾನ ಅಧಿಕಾರಿಗಳು, ಎನ್.ಐ.ಸಿ, ಜಿಲ್ಲಾಡಳಿತ ಭವನ, ಬಾಗಲಕೋಟೆ ರವರಿಗೆ ಸಲ್ಲಿಸುತ್ತಾ ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.
10. ಜಿಲ್ಲಾ ಶಸ್ತ್ರಚಿಕಿತ್ಸಕರು, ಬಾಗಲಕೋಟೆ ಜಿಲ್ಲೆ ರವರ ಮಾಹಿತಿಗಾಗಿ ರವಾನಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
11. ಎಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ರವರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
12. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬಾಗಲಕೋಟೆ ರವರ ಮಾಹಿತಿ ಹಾಗೂ ಅವಗಾಹನೆಗಾಗಿ ಸಲ್ಲಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಿದೆ.
13. ಎಲ್ಲಾ ತಾಲ್ಲೂಕು ಆರೋಗ್ಯಾಧಿಕಾರಿಗಳು ಮತ್ತು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಮತ್ತು ಸಾರ್ವಜನಿಕ ಆಸ್ಪತ್ರೆಗಳ ಆಡಳಿತ ವೈದ್ಯಾಧಿಕಾರಿಗಳು, ಬಾಗಲಕೋಟೆ ಜಿಲ್ಲೆ ರವರ ಮಾಹಿತಿಗಾಗಿ ರವಾನಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲು ಸೂಚಿಸಿದೆ.
14. ಜಿಲ್ಲಾ ಕಾರ್ಯಕ್ರಮ/ಲೆಕ್ಕಪತ್ರ ವ್ಯವಸ್ಥಾಪಕರು, ಎಲ್ಲಾ ಕಾರ್ಯಕ್ರಮಗಳ ಸಂಯೋಜಕರುಗಳು, ಸಮಾಲೋಚಕರುಗಳು ಹಾಗೂ ಇತರೆ ಎಲ್ಲಾ ಕಾರ್ಯಕ್ರಮಗಳ ಸಿಬ್ಬಂದಿಗಳು ಬಾಗಲಕೋಟೆ ಜಿಲ್ಲೆ ರವರ ಮಾಹಿತಿಗೆ.
15. ಕಛೇರಿ ಪ್ರತಿ.